ಹಿಡಿಸ್ತಿದ್ವು. ಅಲ್ಲದೇ ನಮ್ಮ ಕಥಿಗಳಿಗಿ, ಲಾವಣಿಗಳಿಗಿ ನಾವೇ ಸಿದ್ಧಾಂತ ಕಟ್ಟಬಹುದಲ್ಲ ಅನ್ನಿಸ್ತು. ನಮ್ಮ ಸೃಜನಶೀಲ ಪ್ರಕಾರಗಳೇನಿರ್ತಾವ ಅವುಗಳ ಬೇರು ಆ ನೆಲದೊಳಗೆ ಇರ್ತಾವ. ಹಿಂಗಾಗಿ ಇವುಗಳ ಅಧ್ಯಯನಕ್ಕ ಇಲ್ಲೆ ದಾರಿ ತೋರ್ಬೇಕು ಅನ್ನಿಸ್ತು.

ಒಂದು ವರ್ಷ ಏನು ಮಾಡಿದ್ರು ಅಂತಂದ್ರ ಲಾಲಪ್ಪ ಅನ್ನುವ ಕಲಾವಿದನನ್ನು ಕರ್ಕೊಂಡು ಬಂದ್ರು. ಆತ ಬೀದರ ಜಿಲ್ಲೆಯವನು. ಮಹಾನ್ ಕಲಾವಿದ ಅವನು. ಆತ ಬರೀ ಕೋಲಾಟ ಕಲಿಸಲಿಲ್ಲ. ಒಂದು ಹೊಸ ಫಾರ್ಮ್ ಕಲಿಸಿದ್ದ. ಬೀದರ ಜಿಲ್ಲೆಯಲ್ಲಿ ಎರಡು ಸನ್ನಿವೇಶಗಳು ಭಾಳ ಮುಖ್ಯ ಇದ್ವು. ಒಂದು ಕೃಷ್ಣಗೊಲ್ಲತಿ ಸನ್ನಿವೇಶ ಮತ್ತು ಇನ್ನೊಂದು ಸೀತಾಪಹರಣ ಸನ್ನಿವೇಶ. ಇದನ್ನು ಕೋಲಾಟದ ವಿಧಾನದಲ್ಲಿ ಕಲಿಸಿದ್ದ. ಹಾಗೆ ನೋಡಿದ್ರ ಅದು ಕೋಲಾಟ ಅಲ್ಲ. ಕಲಿಯುವವರಿಗೂ ಇದು ಗೊತ್ತಿರಲಿಲ್ಲ. ಕೈಯಲ್ಲಿ ಕೋಲು ಹಿಡಿಯುವುದರಿಂದ ಇದನ್ನು ಅವರು ಕೋಲಾಟ ಅಂತಲೇ ತಿಳಿದಿದ್ರು. ಆದರೆ, ಆತ ಒಂದು ಹೊಸ ಫಾರ್ಮ್ ಕಂಡುಹಿಡಿದಿದ್ದ. ಈ ಸನ್ನಿವೇಶಗಳನ್ನು ಮತ್ತು ಕೋಲಾಟವನ್ನು ವಿಶಿಷ್ಟ ಹದದಲ್ಲಿ ಮಿಶ್ರಣ ಮಾಡಿದ್ದ. ಕೋಲಾಟ ಆಡ್ತಾ ಪಾತ್ರಗಳು ಬರ್ತಾವ. ತಮ್ಮ ಸಂಭಾಷಣೆಯನ್ನು ಹಾಡಿನ ರೂಪದಲ್ಲಿ ಹೇಳಿ ಮತ್ತೆ ಕೋಲಾಟ ಮಾಡ್ತಾ ಹೋಗ್ತಾವ. ಇದು ಭಾಳ ರೋಚಕವಾಗಿತ್ತು. ಕಲೆಯ ಹೊಸ ಶೋಧವಾಗಿತ್ತು. ನಾನು ಆಮೇಲೆ ಬೀದಿ ಬಯಲಾಟಗಳ ಬಗ್ಗೆ ಬರೆದೆ. ಇದನ್ನು ಹೊಸ ಬಯಲಾಟದ ಪ್ರಕಾರವಾಗಿ ಎಸ್ಟಾಬ್ಲಿಶ್ ಮಾಡಿದೆ.

◆ ನೀವು ವಚನ ಇರಲಿ, ಲಾವಣಿ ಇರಲಿ ಕಥೆ ಇರಲಿ, ಜನಪದ ಮಹಾಕಾವ್ಯ ಇರಲಿ, ಸ್ವರ ವಚನ ಇರಲಿ ಮೊದಲು ಅದರ 'ರಚನೆ'ಯನ್ನ ಅಧ್ಯಯನ ಮಾಡಿದ್ರಿ. ಅಂದ್ರ ಅದರ ಸ್ಟ್ರಕ್ಚರ್. ಜನಪದ ಆಚರಣೆ, ಬಯಲಾಟ ಏನೇ ಇದ್ರೂ ನಿಮಗೆ ರಚನೆ ಭಾಳ ಮುಖ್ಯವಾಗಿ ತೋರಿತು. 'ರಚನೆ'ಗಳ ಅಧ್ಯಯನಕ್ಕೆ ಪ್ರಾಮುಖ್ಯತೆ ಯಾಕೆ ಕೊಡಬೇಕು ಅನ್ನಿಸ್ತು?

ನನ್ನ ಅಧ್ಯಯನ ಕ್ರಮನೇ ಹಾಗೆ ಆಗಿತ್ತು. ಹಿಂಗಾಗಿ ಆ ಸ್ಟ್ರಕ್ಚರ್ ಬಗ್ಗೇನೆ ಹೆಚ್ಚು ಬರೆದೆ. ನನ್ನ ಸಿದ್ಧಾಂತಗಳು ಸ್ಟ್ರಕ್ಚರ್ ಬಗೆಗೆ ಇವೆ. ಶಾಂತರಸರು ಅಧ್ಯಕ್ಷರಾಗಿದ್ರಲ್ಲ ಆವಾಗ ಜನಪದ ಮಾಹಕಾವ್ಯಗಳ ಸಂವಹನ ಸ್ವರೂಪ ಅಂತ ಬರೆಯಲಿಕ್ಕೆ ಹೇಳಿದ್ರು. ಅದು ಬರೆಯುವಾಗ ರಚನೆಯನ್ನೆ ಕೇಂದ್ರದಲ್ಲಿ ಇಟ್ಕೊಂಡೆ. ಒಳ್ಳೆಯ ರೆಸ್ಪಾನ್ಸ್ ಸಿಕ್ತು. ಇಡೀ ಕನ್ನಡದ ಒಟ್ಟು ಜನಪದ ಮಹಾಕಾವ್ಯಗಳ ಸ್ಟ್ರಕ್ಚರ್ ಹೇಗಿರ್ತದ ಅನ್ನೋದು ಗೊತ್ತಾಯ್ತು. ಸಿದ್ಧಾಂತ ಅಂದ್ರ ಗುಟ್ಟು ಬಿಡಿಸೊ ಕೆಲಸ. ಏನೋ ಒಂದು ಮೂಲ ಸಂರಚನೆ ಇರ್ತದ. ಅದನ್ನ ಪತ್ತೆ ಹಚ್ಚೊ ಕೆಲಸ.

ಅಂದ್ರ ನಮಗ ಸ್ಪಷ್ಟ ತಿಳೀತದ. ರಚನೆ ಅರ್ಥಮಾಡಿಕೊಳ್ಳೋದು ಗೊತ್ತಾಯ್ತು ಅಂತಂದ್ರ ಪಠ್ಯವನ್ನ ಸರಳವಾಗಿ ತಲುಪಿಸಲಿಕ್ಕ ಸಾಧ್ಯ ಆಗ್ತದ. ಹಾಡು ಅಂದ್ರ ಏನು? ಪಲ್ಲವಿ ಅಂದ್ರ ಏನು? ಸಾಲ ಅಂದ್ರ ಏನು? ಹೀಂಗ ಒಂದೊಂದೆ ಬಿಚ್ಚಿ ಹೇಳಬೇಕಾಗ್ತದ. ಒಂದು ಸಿದ್ಧಾಂತಕ್ಕ ಒಂದು ಕಾನ್ಸೆಪ್ಟ್ ಒಂದು ಮೂಲ ಪರಿಕಲ್ಪನೆ ಬೇಕು. ಅದನ್ನ ಮಾತ್ರ ವೈಜ್ಞಾನಿಕವಾದಂತಹ ಕ್ರಮಬದ್ಧವಾದ ಚೌಕಟ್ಟಿನೊಳಗೆ ಪರಿಚಯ ಮಾಡ್ಬೇಕು. ಒಂದು ಕಾನ್ಸೆಪ್ಟಿನ ವಿವರಣೆ ಮಾಡ್ರಿ ಅಂದ್ರ ಅದು ಒಂದು ಡೆಫಿನೇಶನ್ ಆಗಿಬಿಡ್ತದ. ಕಾನ್ಸೆಪ್ಟ್, ಡೆಫಿನೇಶನ್ ಮತ್ತು ಥೇರಿ ಇವೆಲ್ಲ ಭಾಳ ಮುಖ್ಯ. ಇವು ವಿದ್ಯಾರ್ಥಿಗಳಿಗಿ ಗೊತ್ತಾಗ್ಬೇಕು. ಒಂದು ಕಾನ್ಸೆಪ್ಟು, ಅದಕ್ಕ ವಿವರಣೆ, ಈ ವಿವರಣೆ ವ್ಯಾಖ್ಯಾನ ಅನಿಸಿಕೊಳ್ತದ. ಇನ್ನು ಅದಕ್ಕ ಶಕ್ತಿ ಇತ್ತಂದ್ರ ಅದು ಈ ವಿವರಣೆಯನ್ನು ಮೀರಿ ಬೆಳೀತದ. ಹಾಗ ಬೆಳೀತು ಅಂದ್ರ ಸಿದ್ಧಾಂತ ಅನಿಸಿಕೊಳ್ತದ. ಸಿದ್ಧಾಂತ ಅಂದ್ರ ಒಂದು ಶಿಸ್ತು ಬೇಕು. ಮನಸಿಗಿ ಬಂದಿದ್ದು ಹೇಳೋದಲ್ಲ. ಒಂದು ಕಾನ್ಸೆಪ್ಟು ಅಂದ್ರ ಮೂಲ ವಿಚಾರ, ಆಮ್ಯಾಲ ಕಾನ್ಸೆಪ್ಟಿನ ವ್ಯಾಖ್ಯೆ, ಆ ವ್ಯಾಖ್ಯೆಗೆ ಉದಾಹರಣೆ ಇವೆಲ್ಲ ಸೇರಿ ಒಂದು ಸಿದ್ಧಾಂತವನ್ನ ನಿರ್ಮಾಣ ಮಾಡ್ತಾವ.